


ಕೃಣಾಲ್ ಮತ್ತು ಹಾರ್ದಿಕ್ 'ಪಾಂಡ್ಯ' ಸೋದರರ ನಡುವೆ ಹೊಸ ಚಿಗುರು ಇಶಾನ್ ಕಿಶನ್

# ಹಡಗಾದ ಐಪಿಎಲ್ ದೋಣಿ

■ ವಿಶಾಖ ಎನ್.

'ನಮ್ಮ ಕಾಲದಲ್ಲಿ ಪಾಯಿಂಟ್, ಕವರ್ಸ್ ತಲೆಮೇಲೆ ಹೊಡೆದರೆ ಕೋಚ್‌ಗಳು ಮೊಟಕುತ್ತಿದ್ದರು. ಚನ್ನಿದಾಂಡು ಆಡೋಕೆ ಹೋಗು ಎಂದು ಕ್ಲಾಸ್ ತೆಗೆದುಕೊಳ್ಳುತ್ತಿದ್ದರು' – ಕಪಿಲ್ ದೇವ್ ಹೀಗೆ ಹೇಳಿದ್ದು 2004ರಲ್ಲಿ. ಕ್ಯಾಸ್ಟ್ರಾಲ್ ವರ್ಷದ ಶ್ರೇಷ್ಠ ಕ್ರಿಕೆಟಿಗ ಪ್ರಶಸ್ತಿ ಪ್ರಕಟಿಸಿದ ಸಮಾರಂಭವೊಂದರಲ್ಲಿ ಅವರು ಈ ರೀತಿ ಹೇಳಿದ್ದು ವೀರೇಂದ್ರ ಸೆಹ್ವಾಗ್ ಅವರ ಆಟದ ಬಗೆಗೆ ಮಾತನಾಡುತ್ತಿದ್ದಾಗ. ಸೆಹ್ವಾಗ್ ಹಾಗೂ ಶ್ರೀಲಂಕಾದ ಸನತ್ ಜಯಸೂರ್ಯ ಪಾಯಿಂಟ್ ಹಾಗೂ ಕವರ್ಸ್ ತಲೆಮೇಲೆ ಹೊಡೆಯುತ್ತಿದ್ದುದಷ್ಟೇ ಅಲ್ಲ, ಆಫ್‌ಸ್ಟಂಪ್‌ನ ಆಚೆಗಿನ ಬೌನ್ಸರ್‌ಗಳನ್ನು ಥರ್ಡ್‌ಮನ್ ಬೌಂಡರಿಯತ್ತ ಸಿಕ್ಸರ್‌ಗೂ ಅಟ್ಟುತ್ತಿದ್ದರು. ಆ ಕಾಲಘಟ್ಟಕ್ಕೆ ಮುಂಚೆ 'ಕಾಪಿಬುಕ್ ಶೈಲಿ'ಯ ಆಟಗಾರರು ಇಂಥ ಆಟವನ್ನು ಒಪ್ಪುತ್ತಲೇ ಇರಲಿಲ್ಲ. ಸಿಕ್ಸರ್ ಹೊಡೆಯಬೇಕಾದದ್ದು ಓವರ್ ಪಿಚ್ಡ್ ಎಸೆತಗಳಿಗೆ ಮಾತ್ರ ಎಂತಲೋ, ಸ್ಪಿನ್ನರ್‌ಗೆ ಮುನ್ನುಗ್ಗಿ ಮೇಲಕ್ಕೆ ಹೊಡೆದಾಗಲಷ್ಟೆ ಎಂತಲೋ ಭಾವಿಸಿದವರೇ ಹೆಚ್ಚಾಗಿದ್ದರು. ರಾಹುಲ್ ದ್ರಾವಿಡ್, ವಿವಿಎಸ್ ಲಕ್ಷ್ಮಣ್ ತರಹದ ಆಟಗಾರರದ್ದು ಇದೇ ಶೈಲಿ. ಅವರು ಸಿಕ್ಸರ್‌ಪ್ರಿಯರಲ್ಲ, ಬೌಂಡರಿ ವೀರರು. ಜತೆಗೆ ಸಂಯಮದ ಮೂರ್ತಿಗಳು. ರಾಬಿನ್ ಉತ್ತಪ್ಪ ಕೂಡ ದೇಸಿ ಕ್ರಿಕೆಟ್‌ನಲ್ಲಿ ದ್ರಾವಿಡ್ ಶೈಲಿಯಲ್ಲೇ ಮೊದಮೊದಲು ಆಡುತ್ತಿದ್ದುದು. ಆಮೇಲೆ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರನಾದದ್ದೇ ಪೆಡಲ್ ಸ್ವೀಪ್‌ಗಳು, ಎತ್ತಿಹಾಕುವ ಶಾಟ್‌ಗಳನ್ನೆಲ್ಲ ಅಭ್ಯಾಸ ಮಾಡಿದರು. ಅದರಿಂದ ಅವರ ಸಹಜ ಆಟ ಮುಕ್ಕಾಯಿತೆನ್ನುವುದು ಬೇರೆ ಮಾತು.

'ಇಂಡಿಯನ್ ಪ್ರೀಮಿಯರ್ ಲೀಗ್' (ಐಪಿಎಲ್) ಕ್ರಿಕೆಟ್ 2008ರಲ್ಲಿ ಶುರುವಾದಾಗ ಅದೊಂದು ಪ್ರಯೋಗ ಎನ್ನಿಸಿಕೊಂಡಿತ್ತು. ಕ್ರಿಕೆಟ್ ಸಂಪ್ರದಾಯಸ್ಥರಿಗೆ ಅದರ ಕುರಿತು ಹೇವರಿಕೆ. ರಾಮಚಂದ್ರ ಗುಹಾ ತರಹದ ಕ್ರಿಕೆಟ್ ಇತಿಹಾಸ ತಜ್ಞರಿಗೂ ಅದು ಅಪಥ್ಯ. ಕ್ರೀಡಾಂಗಣಕ್ಕೆ ಹೋಗಿ 20 ಓವರ್‌ಗಳ ಪಂದ್ಯವನ್ನು ತಮ್ಮಿಂದ ನೋಡಲಾಗದು ಎಂದೇ ಅವರು ಬರೆದುಕೊಂಡಿದ್ದರು. ಆದದ್ದೇ ಬೇರೆ. ಲಲಿತ್ ಮೋದಿ ತೇಲಿಬಿಟ್ಟ ಪ್ರಯೋಗದ ದೋಣಿ ಈಗ ದೊಡ್ಡ ಹಡಗಾಗಿದೆ. ದೋಣಿ ಮೇಲೆ ಕುಳಿತಿದ್ದ ಧೋನಿ ಈಗ ಹಡಗಿನಲ್ಲಿ ಯಾರುಯಾರನ್ನೋ ತುಂಬಿಬಿಟ್ಟಿದ್ದಾರೆ ಎನ್ನುವುದು ಸಂಕೇತದ ರೂಪದಲ್ಲಿ ಸರಿಯೇ ಹೌದು.

2008ರಲ್ಲಿ ಐಪಿಎಲ್‌ನ ಮಾಧ್ಯಮ ಹಕ್ಕಿನ ಮೌಲ್ಯ 236 ಕೋಟಿ ರೂಪಾಯಿ. 2019ರಲ್ಲಿ ಅದು 4087 ಕೋಟಿ ರೂಪಾಯಿಗೆ ಏರಿತೆಂದರೆ, ಹದಿನಾರು ಪಟ್ಟು ವಹಿವಾಟು ಬೆಳವಣಿಗೆ ಆಯಿತೆಂದೇ ಅರ್ಥ. ಫ್ರಾಂಚೈಸ್‌ಗಳು ₹27.5 ಕೋಟಿಯಷ್ಟನ್ನು 2008ರಲ್ಲಿ ಆಟಗಾರರ ಹರಾಜಿಗೆಂದು ಎತ್ತಿಟ್ಟಿದ್ದರು. 2017ರ ಹೊತ್ತಿಗೆ ಅದು ₹76.6 ಕೋಟಿಗೆ ಏರಿತ್ತು. 2018ರಲ್ಲಿ ಸ್ಟಾರ್ ಸಮೂಹ ತಲೆ ತೂರಿಸಿದ್ದೇ ಈ ಮೊತ್ತ ₹271 ಕೋಟಿಗೆ ಜಿಗಿಯಿತು.

ವಿಶ್ವದ ಯಾವ ಕ್ರಿಕೆಟ್ ಸಂಸ್ಥೆಯಲ್ಲಿಯೂ ಐಪಿಎಲ್‌ನಲ್ಲಿ ನಡೆಯುವಷ್ಟು ವಾರ್ಷಿಕ ವಹಿವಾಟು ನಡೆಯಲು ಸಾಧ್ಯವೇ ಇಲ್ಲ. ವಿಶ್ವದ ಕ್ರಿಕೆಟ್‌ನ ಅಷ್ಟೂ ವಹಿವಾಟನ್ನು ತೂಕಕ್ಕೆ ಹಾಕಿದರೆ